ECG Tech	01	00	01
Equipment Tech	07	02	05
Dental Mechanic	01	00	01
Radiographer	01	00	01
	18	02	16

ಆರು ಜಿಲ್ಲೆಗಳಲ್ಲಿ ಆರ್.ಸಿ.ಹೆಚ್. ಯೋಜನೆಯಡಿಯ ಶುಶ್ರೂಷಕಿಯರನ್ನು ಖಾಯಂಗೊಳಿಸುವುದು

912 (1491) ಶ್ರಿ ರಹೀಮ ಖಾನ (ಬೀದರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗುಲ್ಬರ್ಗಾ, ಕೊಪ್ಪಳ, ರಾಯಚೂರು, ವಿಜಾಪುರ, ಬೀದರ್ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಆರ್.ಸಿ.ಹೆಚ್, ಗುತ್ತಿಗೆ ಆಧಾರದ ಮೇಲೆ 10 ವರ್ಷದಿಂದ 125 ಜನ ಶುಶ್ರೂಷಕಿಯರು ಸೇವೆ ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇವರ ಜೊತೆಯಲ್ಲಿ ಆರ್.ಸಿ.ಹೆಚ್. ಯೋಜನೆಯಡಿಯಲ್ಲಿ ನೇಮಕಾತಿ ಹೊಂದಿರುವ ವೈದ್ಯಾಧಿಕಾರಿಗಳು, ಲ್ಯಾಬ್ ಟೆಕ್ನಿಷಿಯೆನ್, ಚಾಲಕರು ಹ್ಹಾಗೂ ಇತರೇಯವರನ್ನು ಸರ್ಕಾರ ಖಾಯಂಗೊಳಿಸಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಆರ್.ಸಿ.ಹೆಚ್. ಗುತ್ತಿಗೆ ಆಧಾರದ ಮೇರೆಗೆ (ಯೋಜನೆಯಡಿಯಲ್ಲಿ) ನೇಮಕಾತಿ ಹೊಂದಿರುವ 125 ಶೂಶ್ರೂಷಕಿಯರನ್ನು ಸರ್ಕಾರ ಖಾಯಂಗೊಳಿಸದಿರಲು ಕಾರಣಗಳೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಆರ್.ಸಿ.ಹೆಚ್ ಯೋಜನೆಯಡಿಯಲ್ಲಿ ನೇಮಕಾತಿ ಹೊಂದಿರುವ ವೈದ್ಯಾಧಿಕಾರಿಗಳು, ಲ್ಯಾಬ್ ಟೆಕ್ನಿಷಿಯೆನ್, ಚಾಲಕರು ಹಾಗೂ ಇತರರನ್ನು ಸರ್ಕಾರ ಖಾಯಂಗೊಳಿಸಿರುವುದಿಲ್ಲ. ಆದರೆ, ರಾಜ್ಯ ವಲಯದಿಂದ ಗುತ್ತಿಗೆ

ಆಧಾರದ ಮೇಲೆ ನೇಮಕಾತಿ ಹೊಂದಿದ್ದವರನ್ನು ದಿನಾಂಕ: 16/3/2006 ರಲ್ಲಿ ಖಾಯಂಗೊಳಿಸಲಾಗಿದೆ.

ಇ) ಮಾನ್ಯ ಸರ್ವೋಚ್ಚ ನ್ಯಾಯಾಲಯವು ಶ್ರೀಮತಿ ಉಮಾದೇವಿ ಮತ್ತು ಇತರರು ವಿರುದ್ಧ ರಾಜ್ಯ ಸರ್ಕಾರ ಈ ಪ್ರಕರಣದಲ್ಲಿ ದಿನಾಂಕ: 10/4/2006 ರಂದು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ, ಇಂತಹ ಗುತ್ತಿಗೆ ನೌಕರರನ್ನು ಸೇವೆಯಲ್ಲಿ ಖಾಯಂಗೊಳಿಸಲು ಅವಕಾಶವಿರುವುದಿಲ್ಲ.

ಅಂಗವಿಕಲ ಮಕ್ಕಳಿಗೆ ತ್ರಿಚಕ್ರ ವಾಹನ ವಿತರಣೆ

913 (1114) ಶ್ರೀ ರಾಜು ಕೆ. (ರಾಮನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆಯಿಂದ ಅಂಗವಿಕಲರಿಗೆ ನೀಡುತ್ತಿರುವ ತ್ರಿಚಕ್ರ ಮೋಟಾರು ಸೈಕಲ್‌ಗಳನ್ನು ಸಮರ್ಪಕವಾಗಿ ವಿತರಿಸಲಾಗುತ್ತಿದೆಯೇ;

ಆ) ಹಾಗಿದ್ದಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ತ್ರಿಚಕ್ರವಾಹನಗಳಿಗಾಗಿ ಅರ್ಜಿ ಸಲ್ಲಿಸಿರುವ ಅಂಗವಿಕಲರ ಸಂಖ್ಯೆ ಎಷ್ಟು? ತಾಲ್ಲೂಕು : ಜಿಲ್ಲಾವಾರು ವಿವರ ನೀಡುವುದು;

ಇ) ಕಳೆದ ಮೂರು ವರ್ಷಗಳಲ್ಲಿ ಅರ್ಜಿ ಸಲ್ಲಿಸಿರುವ ಎಲ್ಲಾ ಅಂಗವಿಕಲರುಗಳಿಗೂ ತ್ರಿಚಕ್ರ ವಾಹನಗಳನ್ನು ಒದಗಿಸಲಾಗಿದೆಯೇ?

ಈ) ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು, ವಿವರ ನೀಡುವುದು;

ಉ) ಬಾಕಿ ಉಳಿದಿರುವ ಅರ್ಜಿದಾರರಿಗೆ ತಕ್ಷಣವೇ ತ್ರಿಚಕ್ರವಾಹನ ಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ, ಯಾವಾಗ ವಿತರಿಸಲಾಗುವುದು?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಕಳೆದ 03 ವರ್ಷಗಳಲ್ಲಿ ತ್ರಿಚಕ್ರ ವಾಹನ ಒದಗಿಸಲು 520 ಅರ್ಜಿಗಳನ್ನು ಸ್ವೀಕರಿಸಲಾಗಿದೆ.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.